# ಬ್ರಹ್ಮ ನಿಂಗೆ ಜೋಡಿಸ್ತೀನಿ...

ಮುಂದೆ ಬಂದರೆ ಹಾಯದ, ಹಿಂದೆ ಬಂದರೆ ಒದೆಯದ ಗುಣದ ಗಂಡನ ಬಗ್ಗೆ ಕಮ್ಲೂ ರೋಸಿಹೋಗಿದ್ದಳು. 'ನಿನಗೆಂಥ ಗಂಡ ಬೇಕು ಹೇಳು ಕಮಲಮ್ಮ, ಕೊಡುತ್ತೇನೆ?' ಎಂದು ಬ್ರಹ್ಮನೇ ಎದುರಿಗೆ ಬಂದು ಒತ್ತಾಯಿಸಿದಾಗ ಕಮ್ಲೂ ಫುಲ್ ಕನ್‌ಫ್ಯೂಸ್! ಕೊನೆಗೆ ಅವಳು ಕೇಳಿದ್ದೇನು ಗೊತ್ತೇ?

■ ವೈ.ಕೆ. ಸಂಧ್ಯಾ ಶರ್ಮ
ಕಲೆ: ಭಾವು ಪತ್ತಾರ್

ಗಂಡ ಶ್ರೀಕಂಠುವಿನ ಮೇಲೆ ಕಮ್ಲೂದು ಸಾಲು ಸಾಲು ಕಂಪ್ಲೆಂಟ್ಸೂ! ತನ್ನ ಹಾಗೇ ಅವನೂ ವಾಚಾಳಿಯಲ್ಲ. ಅತೀ ಮಾತಿರಲಿ, ಅಗತ್ಯವಿದ್ದಾಗ್ಯೂ ತುಟಿ ಹೋಳು ಮಾಡಲ್ಲ. ಬಾಯಿ ಬಿಡಕ್ಕೂ ಚೌಕಾಸಿ ಮಾಡೋ ವಿಚಿತ್ರ ಆಸಾಮಿ. ಕೇಳಿದ ಪ್ರಶ್ನೆಗೆ ಉತ್ತರ ಬಂದ್ರೆ ಪುಣ್ಯ... 'ಹೂಂ... ಉಹೂಂ' ಕೂಡ ಕಷ್ಟವೇ. ಇಂಥ ಪ್ರಾಣಿ ಜೊತೆ ಜಗಳ ಮಾಡೋದಿರಲಿ, ಸಂಸಾರ ಮಾಡೋದು ತಾನೇ ಹೇಗೆ ಅಂತ ಅವಳ ತಕರಾರು. ಮುಖಕ್ಕೆ ಪೇಪರ್ ಅಡ್ಡ ಹಿಡಿದು ಕುರ್ಚಿಗೆ ಅಂಟು ಹಾಕಿಕೊಂಡು ಕುಳಿತುಬಿಡೋ ಪತಿರಾಯನ ಮುಂದೆ ನಿಂತು, ಗೋಡೆ ಮುಂದೆ ಮಾತಾಡಿದ ಹಾಗೇ ಏನೋ ಒಂದು ಒದರಿ ಅವನಿಂದ ಉತ್ತರವನ್ನೂ ನಿರೀಕ್ಷಿಸದೆ ಗೊಣಗ್ತಾ ಜಾಗ ಖಾಲಿ ಮಾಡ್ತಾಳೆ ಕಮ್ಲೂ.

ಇಡೀ ದಿನ ಮಾತನಾಡದೇ ಇದ್ರೆ ನಾಲಗೆ ಎಲ್ಲ ಕೆರೆದ ಹಾಗಾಗಿ, ಹೊಟ್ಟೆ ತುಂಬಾ ತುಂಬಿಕೊಂಡ ಯಾರ್ಯಾರದೋ ವಿಷಯಗಳನ್ನು ಹೊರಕಕ್ಕಲು ಹವಣಿಸುತ್ತ, ಕಲ್ಲಿನ ಹಾಗೆ ಅಲುಗಾಡದೆ ಕೂತ ಗಂಡನ ಭುಜ ತಿವಿದು – 'ರೀ...' ಎಂದು ಒರಲುತ್ತಾಳೆ.

'ನೀವು ಹೂಂಗುಟ್ಟಿ ಸಾಕು, ನಾನು ಹೇಳ್ತಾ ಹೋಗ್ತೀನಿ, ಪಾವುದ್ದ ಕಿವಿ ಇದ್ಯೆಯಲ್ಲ ಹೇಗೂ, ನನ್ನ ಮಾತುಗಳನ್ನ ಒಳಗೆ ಹುಯ್ಕೊಳ್ಳಿ...' ಎಂದವಳು ತಾರಕ ಸ್ಥಾಯಿಯಲ್ಲಿ ಉತ್ಸಾಹದಿಂದ ಮಾತನಾಡಲು ಪ್ರಾರಂಭಿಸಿದರೆ ಅವನಿಂದ ಉಭಾ ಶುಭಾ ಇಲ್ಲ.

ತುಂಬಾ ರೇಗಿ ಹೋಯ್ತು ಕಮ್ಲೂಗೆ.

'ನನ್ನ ಹಣೆಬರಹ... ಎಂಥ ಮೂಕಪ್ರಾಣಿ ಗಂಟುಬಿತ್ತಪ್ಪ ನನಗೆ... ನಾನು ಏನಾದರೂ ಹೇಳೋಕ್ಕೆ ಬಂದ್ರೆ ಪೇಪರ್ ಹಿಡ್ಕೊಂಡು ಕೂತ್ಕೊಳ್ಳೋದು, ಇಲ್ಲ ಟೀವಿಯಲ್ಲಿ ಜೋರಾಗಿ ನ್ಯೂಸ್ ಹಾಕ್ಕೊಂಡು – 'ಸ್ವಲ್ಪ ತಡಿ... ಪ್ರಪಂಚಾನೇ ತಲ್ಲಣಿಸಿ ಹೋಗ್ತಿದೆ... ಉಕ್ರೇನ್ ಹೊತ್ತಿ ಉರೀತಿದೆ, ರಷ್ಯಾದ ಮುಂದಿನ ಹೆಜ್ಜೆ ಏನು ನೋಡೋಣ ತಡಿ' ಎಂದು ಅವಳ ಬಡಬಡಿಸುವ ಬಾಯಿಗೆ ಬ್ರೇಕ್ ಹಾಕಿದಾಗ, ಅವಳು ಸ್ಪ್ರಿಂಗ್ ಕಿತ್ತ ಬೊಂಬೆಯಂತೆ ಚಿಮ್ಮಿ ಮೇಲೆದ್ದು, 'ಅಷ್ಟಿದ್ರೆ, ನೀವೂ ಒಂದು ಗನ್ ಹಿಡ್ಕೊಂಡು ಅಲ್ಲಿಗೆ ಹೋಗೋದು ತಾನೇ, ಇಲ್ಯಾಕೆ ಝೂಂಡಾ ಊರಿದ್ದೀರಾ... ಹೂಂ... ನಿಮ್ಮಂಥವರಿಗೇಕೋ ಸಂಸಾರ...' ಎಂದು ಅಸಮಾಧಾನದಿಂದ ಹಾರಾಡಿದಳು.

'ಅಯ್ಯೋ ಬ್ರಹ್ಮ! ಅದೇನು ಸೃಷ್ಟಿ ಮಾಡಿದ್ಯೋ ಇಂಥ ಸ್ಪೆಸಿಮನ್‌ನಾ? ಏಳೇಳು ಜನ್ಮಕ್ಕೂ ಬೇಡವೇ ಬೇಡಪ್ಪ ಇಂಥ ಗಂಡ' ಎಂದು ಹಣೆ ಹಣೆ ಚಚ್ಚಿಕೊಂಡು ಮುಖ ಗಂಟಿಕ್ಕಿಕೊಂಡು ಅವಳು ಕೋಪದಿಂದ ಬಿರ್ರನೆ ಮುಂಬಾಗಿಲಿಗೆ ನಡೆದಳು.

ಅವಳು ಬಾಗಿಲು ತೆಗೆಯಕ್ಕೂ, ಅದೇ ಸಮಯಕ್ಕೆ ಮನೆ ಮುಂದೆ ಯಾರೋ ಮೇಲಿನಿಂದ ಜರ್ರನೆ ಪ್ಯಾರಾಚ್ಯೂಟಿನಿಂದ ಇಳಿಯೋದಕ್ಕೂ ಸಮವಾಯಿತು.

ಎದುರಿಗೆ ಅವತರಿಸಿದ ಪೌರಾಣಿಕ ವೇಷದ ವ್ಯಕ್ತಿ ಕಂಡು ಕಮ್ಲೂ ಬೆಚ್ಚಿ ಬಿದ್ಲು. ಯಾವುದೋ ನಾಟಕದ ವೇಷಧಾರಿ ದಾರಿತಪ್ಪಿ ತಮ್ಮ ಮನೆಯ ಗೇಟು ತೆರೆಯುತ್ತಿದ್ದಾನೆಂದು ಭಾವಿಸಿದ ಅವಳು, 'ಯಾರು... ಯಾರು ಬೇಕಿತ್ತು ನಿಮಗೆ?' ಎಂದವಳು ಅಚ್ಚರಿಯಿಂದ ಬಂದವನತ್ತ ಪ್ರಶ್ನೆಯನ್ನು ಎಸೆದು, ದಿಟ್ಟಿಯನ್ನು ಚೂಪುಗೊಳಿಸಿ ನೋಡಿದಾಗ ಮೈ ಜುಮ್ಮೆಂದಿತು.

ನಾಲ್ಕು ತಲೆಯ ಮನುಷ್ಯ! ಥೇಟ್ ಸಿನಿಮಾದಲ್ಲಿ ಕಂಡ ಹಾಗೇ ಬ್ರಹ್ಮನ ಅಪರಾವತಾರ! ಮೇಕಪ್‌ನಿಂದ ಹಿಡಿದು ಕಾಸ್ಟ್ಯೂಮ್‌ವರೆಗೂ.

ಮತ್ತೂ ಕಣ್ಣಗಲಿಸಿ ನೋಡಿದಳು. ವೇಷ ಅಲ್ಲ... ನಿಜವಾದ ಮುಖಭಾವ ಚತುರ್ಮುಖಗಳಲ್ಲೂ... ಪಿಳಿ ಪಿಳಿ ಕಣ್ಣುಗಳು. ಒಣಗಿದ ಹುಲ್ಲಿನಂಥ ಉದ್ದನೆಯ ಬಿಳಿಯ ಗಡ್ಡ. ನಾಲ್ಕೂ ದಿಕ್ಕಿನಲ್ಲಿ ಎದ್ದುಕಂಡ ಕಿರೀಟಗಳು.

ಮೆಟ್ಟಿಬಿದ್ದಳು ಕಮ್ಲೂ! ಕೈ ಕಾಲಲ್ಲಿ ಗಡ ಗಡ..!

'ನಾನೇಮ್ಮ ಬ್ರಹ್ಮ , ನೀನು ಈಗತಾನೆ ನನ್ನ ನೆನೆಸಿಕೊಳ್ತಿದ್ಯಲ್ಲ, ಅದೇ ಸೃಷ್ಟಿಕರ್ತ ಬ್ರಹ್ಮ ಕಣಮ್ಮ'.

ಸ್ವತಹ ಬ್ರಹ್ಮದೇವನೇ ದುಢುಮ್ಮನೆ ಎದುರಿಗೆ ಧುಮುಕಿದಾಗ ಅವಳ ಬಾಯಿ ಕಟ್ಟಿತು. ಮುಖ ಬಿಳಿಚಿಕೊಂಡಿತು.

'ತಾಯಿ, ನಿನಗೇನು ವರ ಬೇಕೋ ಧಾರಾಳವಾಗಿ ಕೇಳ್ಕೊಮ್ಮ, ಈಗಲೇ ಕೊಡ್ತೀನಿ... ನಿನ್ನ ಈಗಿನ ಗಂಡ ಶ್ರೀಕಂಠುವನ್ನ ಬದಲಾಯಿಸಿ ಕೊಡಲೇ? ಅರಳುಹುರಿದಂತೆ, ಸದಾ ವಟಗುಟ್ಟೋ ಜೋರುದನಿಯ, ಮಾತಿನಲ್ಲೇ ತಲೆ ತಿನ್ನೋ ಎಂಥ ಬಾಯಿಬಡುಕ ಬೇಕಾ ನಿನಗೆ... ಕೇಳ್ಕೋ... ಈಗಲೇ

